

ಹೊಸತರಲ್ಲಿ ಹಿತವೆನಿಸುವ ಸಂಬಂಧಗಳು ಮುರಿದುಬಿದ್ದಾಗ, ವೈಮನಸ್ಸು ಮೂಡಿದಾಗ ಅತ್ಯಾಚಾರ, ಮೋಸ, ವಂಚನೆ, ಕಿರುಕುಳದ ರೂಪ ತಾಳಿ ಕೋರ್ಟ್ ಮೆಟ್ಟಿಲು ಹತ್ತುವುದು ಈಗೀಗ ಹೆಚ್ಚಾಗುತ್ತಿವೆ. ಮಾನವನ ವೈಯಕ್ತಿಕ, ಸಂಕೀರ್ಣ ಮತ್ತು ಸೂಕ್ಷ್ಮ ಅನುಭವದ ಪ್ರೀತಿಯನ್ನು ಆರೋಪಿಯನ್ನಾಗಿಸಿ ಕೋರ್ಟಿನ ತಕ್ಕಡಿಯಲ್ಲಿ ತೂಗುವುದು ಎಷ್ಟು ಸರಿ? ಖಾಸಗಿ ಒಡನಾಟ, ಒಪ್ಪಿಗೆಯಿಂದ ಕೂಡಿದ್ದ ದೈಹಿಕ ಸಂಬಂಧಗಳು ಏಕಾಏಕಿ 'ವಂಚನೆ' ಅಥವಾ 'ಸಮ್ಮತಿಯ ತಪ್ಪುಗ್ರಹಿಕೆ' ಎಂಬ ರೂಪಾಂತರಕ್ಕೆ ತಿರುಗುವುದು ಸಮಂಜಸವೇ? ಈ ನಿಟ್ಟಿನಲ್ಲಿ ಭಾರತೀಯ ನ್ಯಾಯ ಸಂಹಿತೆಯ (ಬಿಎನ್ಎಸ್) ಸೆಕ್ಷನ್ 69 ಅನ್ನು ಹೇಗೆ ಅರ್ಥೈಸಬೇಕು ಎನ್ನುವುದನ್ನು ಲೇಖನ ಹೇಳುತ್ತದೆ.

